(ಅನುಬಂಧ–I)

(ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು)

3. ಪ್ರತಿಪಕ್ಷವನ್ನು ಸದನಕ್ಕೆ ಹಾಜರಾಗುವಂತೆ ಕರೆಯಲು ಸರ್ಕಾರಕ್ಕೆ ಮನವಿ

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರ ಜೊತೆಗೆ ಒಮ್ಮೆ ಚರ್ಚೆ ಮಾಡಿ ಈ ಬಿಲ್‌ಗಳನ್ನು ಪಾಸ್ ಮಾಡುವುದು ಸಂವಿಧಾನದ ಕ್ರಮವಾಗುತ್ತದೆ, ನಾವು ಕಿರಿಯ ಸದಸ್ಯರು ಈ ಒಂದು ಕೆಟ್ಟ ಪರಂಪರೆಯನ್ನು ಕಾಣುವುದು ಬೇಕಾಗಿಲ್ಲ. ಈ ಬಿಲ್ ಗಳನ್ನು ಪಾಸ್ ಮಾಡುವುದು ಈ ರಾಜ್ಯಕ್ಕೆ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ಸದನವನ್ನು ಸ್ವಲ್ಪ ಕಾಲ ಮುಂದೂಡಿ, ಒಂದು ಪ್ರಯತ್ನ ಮಾಡಿ, ತದನಂತರ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವೆನ್ನುವುದು ನನ್ನ ಬೇಡಿಕೆ.

ಅಧ್ಯಕ್ಷರು: ಅವರನ್ನು ಸಲಹಾ ಸಮಿತಿಯ ಸಭೆಗೂ ಕರೆಯಲಾಗಿತ್ತು, ಬರಲಿಲ್ಲ, ಬಹುಶಃ ಕಾನೂನು ಮತ್ತು ಸಂಸದೀಯ ಸಚಿವರು ಬಹಳ ಪ್ರಯತ್ನ ಮಾಡಿದ್ದಾರೆ, ನಾನೂ ಪ್ರಯತ್ನವನ್ನು ಮಾಡಿದ್ದೇನೆ, ಈಗಲೂ ಸದನದ ಮೂಲಕ ವಿನಂತಿಯನ್ನು ಮಾಡಿದ್ದೇನೆ, ಪ್ರಯತ್ನವನ್ನು ಮಾಡೋಣ.

ಶ್ರೀ ವೆಂಕಟರಮಣಪ್ಪ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರನ್ನು ಹೊರಗೆ ಇಟ್ಟು ಇಲ್ಲಿ ಬಿಲ್‌ಗಳನ್ನು ಪಾಸ್ ಮಾಡುವುದು ಸರಿಯಲ್ಲ...

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ಅವರನ್ನು ಬರಬೇಡಿ ಎಂದು ಯಾರೂ ಹೇಳಿಲ್ಲ. ಅವರು ಬರಬಹುದು, ಚರ್ಚೆ ಮಾಡಬಹುದು. ಆದರೆ ಅವರು ಬರಲೇ ಇಲ್ಲವಲ್ಲಾ?

ಒಬ್ಬ ಮಾನ್ಯ ಸದಸ್ಯರು: ಅವರು ಮಾತನಾಡಲು ಅವಕಾಶ ಮಾಡಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ನಿಮ್ಮ ಮನವಿಯನ್ನು ಅವರಿಗೆ ತಿಳಿಸುವ ಪ್ರಯತ್ನ ಮಾಡುತ್ತೇನೆ.

ಶ್ರಿ ವೆಂಕಟರಮಣಪ್ಪ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದಲ್ಲಿ ತಾವು ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದವರನ್ನು ದೂರ ಇಟ್ಟು ಸದನ ನಡೆಸುವುದು ಉಚಿತವಲ್ಲ. ವಿರೋಧ ಪಕ್ಷದವರು ಹೊರಗಡೆ ಇದ್ದಾರೆ. ಅವರನ್ನು ಕರೆದು ಮಾತನಾಡುವ ಸೌಜನ್ಯ ಬೇಡವಾ ನಿಮಗೆ?

ಅಧ್ಯಕ್ಷರು: ಅವರನ್ನು ಕರೆಯುವ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಅವರು ಸಿಗುತ್ತಿಲ್ಲ. ಇನ್ನೊಂದು ಸಾರಿ ಪ್ರಯತ್ನ ಮಾಡುತ್ತೇವೆ. ಹಾಗೆಂದು ಹೇಳಿ ಸದನವನ್ನು ಮುಂದೂಡವುದಕ್ಕಾಗುವುದಿಲ್ಲ.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು.

I) ಶ್ರೀ ಬಿ.ಎಸ್. ಯಡಿಯೂರಪ್ಪ, (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ನಾಗರೀಕ ಸೇವಾ 1978ರ ಅಧಿನಿಯಮ 8(3)ರನ್ವಯ

1. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 1978ಕ್ಕೆ (ಸಮೂಹ 'ಎ' ಅಧಿಕಾರಿಗಳ ಉನ್ನತ ಅಧ್ಯಯನಕ್ಕೆ ತರಬೇತಿ ಮತ್ತು ಪ್ರತಿಯೋಜನೆ ರಜೆ) ನಿಯಮಗಳು 2008ಕ್ಕೆ ತಿದ್ದುಪಡಿಗೆ ಸಂಬಂಧಿಸಿದಂತೆ ನಿಯಮ 1ಕ್ಕೆ ತಿದ್ದುಪಡಿ ಮಾಡಿ ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಎಫ್‌ಡಿ 05 ಎಸ್‌ಆರ್‌ಎ 2008, ದಿನಾಂಕ 06.07.2010ರ ಅಧಿಸೂಚನೆ.
2. ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಗಳು, 2002ಕ್ಕೆ ಕರ್ನಾಟಕ ಸಿವಿಲ್ (ಅಸಾಧಾರಣ ನಿವೃತ್ತಿ ವೇತನ) ನಿಯಮಗಳು 2003 ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮ 2ಸಿ ರ ಉಪಬಂಧಗಳನ್ನು ಮಾರ್ಪಡಿಸುವ/ತಿದ್ದುಪಡಿ ಮಾಡುವ ಬಗ್ಗೆ ದಿನಾಂಕ 19.11.2010ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2010, ಅಧಿಸೂಚನೆ ಸಂಖ್ಯೆ–II ಎಫ್‌ಡಿ 2 ಎಸ್‌ಆರ್‌ಎ 2010 ಹಾಗೂ ಅಧಿಸೂಚನೆ ಸಂಖ್ಯೆ–III ಎಫ್‌ಡಿ 2 ಎಸ್‌ಆರ್‌ಎ 2010ರ ಅಧಿಸೂಚನೆಗಳು.

3) ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) ಸಾಮಾನ್ಯ ನಿಯಮಗಳು 2006 ನಿಯಮ 6ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಿ ಹೊರಡಿಸಲಾದ ದಿನಾಂಕ 28.03.2011ರ ಅಧಿಸೂಚನೆ ಸಂಖ್ಯೆ ಸಿಆಸುಇ 50 ಸೇವನೆ 2010 ರ ಅಧಿಸೂಚನೆಗಳನ್ನು ಮಂಡಿಸುತ್ತೇನೆ.